**ಸಾಕ್ಷಿಗೆ ದಿನಾಂಕ: 11.10.2022 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ SDB ರವರಿಂದ**

ದಾವಾ ಆಸ್ತಿ ನಂ. 1060/ಎ. ಇದರ ಕ್ಷೇತ್ರ ಅಗಲ 21 ಪೂಟ್ ಮತ್ತು ಉದ್ದ 126 ಪೂಟ್ ಇರುತ್ತದೆ. ಪ್ರತಿವಾದಿಯರ ಆಸ್ತಿಯು ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪೂರ್ವಕ್ಕೆ ಮುಖ ಮಾಡಿ ಇರುತ್ತದೆ. ದಾವಾ ಆಸ್ತಿಯು ಮೂಲವಾಗಿ ತುಂಗಮ್ಮ ನಾರಾಯಣ ದೈವಜ್ಞರವರಿಗೆ ಸೇರಿರುತ್ತದೆ. ಅವರ ತನಗೆ ಮಕ್ಕಳಿರದೇ ಇರುವ ಕಾರಣ ಆಸ್ತಿಯನ್ನು ತನ್ನ ತಮ್ಮನಾದ ಯಲ್ಲಪ್ಪ ಕೃಷ್ಣಪ್ಪ ಪೆಡ್ನೆಕರ ಇವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಯಲ್ಲಪ್ಪ ಕೃಷ್ಣಪ್ಪ ಪೆಡ್ನೆಕರ ನನ್ನ ಗಂಡನ ಚಿಕ್ಕಪ್ಪ. ಸದರಿ ಯಲ್ಲಪ್ಪ ಕೃಷ್ಣಪ್ಪ ಪೆಡ್ನೆಕರ ಇವರಿಗೂ ಸಹ ಯಾವುದೇ ಸಂತಾನ ಇರದೇ ಇರುವ ಕಾರಣ ಅವರ ಮರಣದ ನಂತರ ದಾವಾ ಆಸ್ತಿಯು ಅವರ ಹೆಂಡತಿಯ ಹೆಸರಿಗೆ ವರ್ಗಾವಣೆ ಆಗಿರುತ್ತದೆ. ನಂತರ ಯಲ್ಲಪ್ಪ ಕೃಷ್ಣಪ್ಪ ಪೆಡ್ನೆಕರ ಇವರ ಹೆಂಡತಿಯಾದ ಪದ್ಮಾವತಿಯು ಮರಣ ನಂತರ ಸದರಿ ಆಸ್ತಿ ನನ್ನ ಗಂಡನ ಹೆಸರಿಗೆ ವರ್ಗಾವಣೆಯಾಗಿರುತ್ತದೆ. ಸದರಿ ದಾವಾ ಆಸ್ತಿ ನನ್ನ ಗಂಡನ ಹೆಸರಿಗೆ ವರ್ಗಾವಣೆಯಾಗಲು ನನ್ನ ಗಂಡನ ಎಲ್ಲಾ ಸಂಬಂಧಿಕರು ಒಂದು ಅರ್ಜಿಯ ಮೇಲೆ ಸಹಿ ಮಾಡಿ ಸಮ್ಮತಿ ನೀಡಿದ್ದರಿಂದ ಪಂಚಾಯತಿಯಿಂದ ದಾವಾ ಆಸ್ತಿಯು ನನ್ನ ಗಂಡನ ಹೆಸರಿಗೆ ವರ್ಗಾವಣೆ ಆಗಿರುತ್ತದೆ. ನಂತರ ದಾವಾ ಆಸ್ತಿಯನ್ನು ನನ್ನ ಗಂಡ ನನ್ನ ಹೆಸರಿಗೆ ಮಾಡಿರುತ್ತಾರೆ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ವಾಡಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ಒಂದು ಆಸ್ತಿಯು ಬೇರೆಯವರ ಹೆಸರಿಗೆ ವರ್ಗಾವಣೆ ಆಗಬೇಕಾದರೆ ನೊಂದಾಯಿತ ದಾಖಲೆ ಪ್ರಕಾರ ಆಗಬೇಕೆಂದರೆ ನಿಜ. ಈ ರೀತಿಯಾಗಿ ಕಾನೂನುಬದ್ಧವಾಗಿ ದಾವಾ ಆಸ್ತಿಯು ನನ್ನ ಗಂಡನ ಹೆಸರಿಗೆ ವರ್ಗಾವಾಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪಂಚಾಯತಿಯಿಂದ ವರ್ಗಾವಣೆ ಆಗಿರುತ್ತದೆ ಎಂದು ಹೇಳುತ್ತಾರೆ.

ಯಲ್ಲಪ್ಪ ಕೃಷ್ಣಪ್ಪ ಪೆಡ್ನೇಕರ ಇವರು ದಾವಾ ಆಸ್ತಿಯನ್ನು 11.07.1969 ರಲ್ಲಿ ಖರೀದಿಸಿದ ಕಾಗದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಕ್ರಯ ಪತ್ರ ಎಂದರೆ ನಿಪಿ 1 ರಲ್ಲಿರುವ ಆಸ್ತಿ ನಮಗೆ ವರ್ಗಾವಣೆ ಆಗಿರುತ್ತದೆ. ನಿಪಿ 1 ರಲ್ಲಿರುವ ಎಲ್ಲಾ ವಿಷಯಗಳು ನನಗೆ ಗೊತ್ತು. ನಿಪಿ 1 ರ ಪುಟ 3 ರಲ್ಲಿ 3 ನೇ ಸಾಲಿನಲ್ಲಿ <u>"ಉತ್ತರಕ್ಕೆ ಇರುವ ಚಂದಿಗೋಡೆ ಸಾಮೂಹಿಕ ½ ಅಂಶ ಹಕ್ಕು ಸಹಿತ ಮನೆ ವ ಹಿತ್ತಲು ನಿಮ್ಮ ಕಬ್ಜಾಗೆ ಕೊಟ್ಟಿರುತ್ತೇನೆ"</u> ಎಂದು ಬರೆದಿದ್ದು ಇದೆ ಎಂದೆರ ನಿಜ.

ನಿಪಿ 1 ರಲ್ಲಿ ಹೇಳಿರುವ ಉತ್ತರಕ್ಕೆ ಇರುವ ಚಂದಿಗೋಡೆ ಈಗಲೂ ಸಹ ಹಾಗೇಯೇ ಇದೆ ಎಂದರೆ ಸಾಕ್ಷಿಯು ಈಗ ಬಿದ್ದು ಹೋಗಿದೆ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಸ್ವಲ್ಪ ಸ್ವಲ್ಪ ಬಿದ್ದಿದೆ ಎಂದು ಹೇಳುತ್ತಾರೆ. ಸದರಿ ಚಂದಿಗೋಡೆಯಿಂದ 3 ಪೂಟ್ ಬಿಟ್ಟು ಪ್ರತಿವಾದಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು 3 ಪೂಟ್ ಬಿಟ್ಟಿರುವುದಿಲ್ಲ ಕೇವಲ ಒಂದೂವರೆ ಪೂಟ್ ಮಾತ್ರ ಬಿಟ್ಟಿರುತ್ತಾರೆ ಎಂದು ಹೇಳುತ್ತಾರೆ. ಪ್ರತಿವಾದಿಗಳು ಮನೆ ಕಟ್ಟಿಕೊಳ್ಳುವಾಗ ಸದರಿ ಚಂದಿಗೋಡೆಗೆ ಯಾವುದೇ ತೊಂದರೆ ಮಾಡಿರುವುದಿಲ್ಲ ಎಂದರೆ ನಿಜ. ದಾವಾ ಆಸ್ತಿಯು 126 X 21 ರಲ್ಲಿ ಒಟ್ಟು ಜಾಗದಲ್ಲಿ ನಮ್ಮ ಮನೆ ಇದೆ ಎಂದರೆ ಸಾಕ್ಷಿಯು ಪ್ರತಿವಾದಿಗಳು ನಮ್ಮ ಆಸ್ತಿಯ ಭಾಗದ ಮೇಲೆ ಮನೆ ಕಟ್ಟುತ್ತಾ ಇರುವುದರಿಂದ ಈಗ ಕಡಿಮೆ ಇದೆ ಎಂದು ಹೇಳುತ್ತಾರೆ. ನಮ್ಮ ಮನೆ ಹಳೆಯ ಮನೆ ಆಗಿರುತ್ತದೆ. ನಿಪಿ 1 ರಲ್ಲಿರುವ ಮನೆ ಈಗಲೂ ಸಹ ಹಾಗೇಯೇ ಇದೆ ಎಂದರೆ ನಿಜ.

ವಾದ ಪತ್ರದಲ್ಲಿ ಪ್ರತಿವಾದಿಗಳು ಸುಮಾರು 4 ಪೂಟ್ ಜಾಗವನ್ನು ಅತೀಕ್ರಮಣ ಮಾಡಿರುತ್ತಾರೆ ಎಂದು ಬರೆಯಿಸಿರುತ್ತೇನೆ. ಹೀಗೆ ಬರೆಯಿಸದೇ ಇದ್ದರೂ ಸಹ ಬರೆಯಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ ಅದರಲ್ಲಿ ಹಳೆ ಚಂದಿಗೋಡೆಯನ್ನು ಬಿಟ್ಟು ಹೊಸದಾಗಿ ಪ್ರತಿವಾದಿಗಳು ಮನೆ ಕಟ್ಟುತ್ತಿದ್ದಾರೆ ಎಂದು ಕೇಳಲಾಗಿ ಸಾಕ್ಷಿಯು ಒಪ್ಪಿದ್ದರಿಂದ ಅದನ್ನು **ನಿಡಿ 1** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಛಾಯಾಚಿತ್ರವನ್ನು ತೋರಿಸಿ ಪ್ರತಿವಾದಿಗಳು ಮನೆಗೆ

ಚಂದಿಗೋಡೆಯಿಂದ 3 ಪೂಟ್ ಅಂತರದಲ್ಲಿ ಇದೆ ಎಂದು ಕೇಳಲಾಗಿ ಸಾಕ್ಷಿಯು ಸರಿ ಆದರೆ ಹೋಗುತ್ತಾ ಹೋಗುತ್ತಾ ಕ್ರಾಸ್ ಆಗಿ ಕಡಿಮೆ ಅಂತರ ಇರುತ್ತದೆ ಎಂದು ಹೇಳುತ್ತಾರೆ. ಆದ್ದರಿಂದ ಸದರಿ ಛಾಯಾಚಿತ್ರವನುನ **ನಿಡಿ 2** ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಛಾಯಾಚಿತ್ರವನ್ನು ತೋರಿಸಿ ಗೋಡೆಗೆ 3 ಪೂಟ್ ಅಂತರ ತೋರಿಸುತ್ತದೆ ಎಂದು ಕೇಳಲಾಗಿ ಸಾಕ್ಷಿಯು ಒಪ್ಪಿದ ಕಾರಣ ಅದನ್ನು **ನಿಡಿ 3** ಎಂದು ಗುರುತಿಸಲಾಯಿತು.

ನನ್ನ ವಾದ ಪತ್ರದ 4 ನೇ ಪ್ಯಾರಾದಲ್ಲಿ ಬರೆದಿರುವ ಇಬ್ಬರು ಪಕ್ಷಗಾರರಿಗೆ ತಲಾ 21 ಪೂಟ್ ಬರಬೇಕು ಎಂದು ಬರೆಯಿಸಿದ್ದು, ಸದರಿ ಅಂಶವನ್ನು ಸಾಬೀತಪಡಿಸಲು ಯಾವ ದಾಖಲೆ ಇದೆ ಎಂದರೆ ಸಾಕ್ಷಿಯು ನಿಪಿ 1 ಇದೆ ಎಂದು ಹೇಳುತ್ತಾರೆ. ಹಾಗಾದರೆ 42 ಪೂಟ್ ಇತ್ತು ಅದು ಸಮಾನಾಗಿ ತಲಾ 21 ಪೂಟ್ ಆಗಬೇಕು ಎಂದು ತೋರಿಸಲು ಯಾವ ದಾಖಲೆ ಇದೆ ಎಂದರೆ ಸಾಕ್ಷಿ ಪ್ರತ್ಯೇಕವಾದ ಯಾವುದೇ ದಾಖಲೆ ಇಲ್ಲ ಎಂದು ಹೇಳುತ್ತಾರೆ. ನಡುವೆ ಗೋಡೆ ಇರುವುದರಿಂದ ಹಾಗೂ ಪ್ರತಿವಾದಿಗಳು 3 ಪೂಟ್ ಅಂತರದಲ್ಲಿ ಮನೆ ಕಟ್ಟುವುದರಿಂದ ನಮ್ಮ ಆಸ್ತಿಯನ್ನು ಅತೀಕ್ರಮಣ ಮಾಡುವ ಪ್ರಶ್ನೆ ಉದ್ಭವ ಆಗುವುದಿಲ್ಲ ಎಂದರೆ ಸರಿಯಲ್ಲ.

ನನ್ನ ವಾದ ಪತ್ರದ 4 ನೇ ಪ್ಯಾರದಲ್ಲಿ 4 ಪೂಟ್ ಜಾಗವನ್ನು ಅತೀಕ್ರಮಣ ಮಾಡಲು ಸಂಚನ್ನು ಮಾಡಿರುತ್ತಾರೆ ಎಂದು ಬರೆದ ಅಂಶ ಸುಳ್ಳು ಇದೆ ಎಂದರೆ ಸರಿಯಲ್ಲ. ಮುಂದುವರೆದು ಪ್ರತಿವಾದಿಗಳು ಮೂಲ ಗೋಡೆ ಕೆಡವಿ ಹೊಸ ಪಾಯ ಮಾಡುವ ಸಂಚನ್ನು ನಡೆಸಿರುತ್ತಾರೆ ಎಂದು ಬರೆದಿರುವ ಅಂಶ ಸಹ ಸುಳ್ಳು ಇದೆ ಎಂದರೆ ಸರಿಯಲ್ಲ. ಹಾಗೇ 4 ನೇ ಪ್ಯಾರದಲ್ಲಿ ಮುಂದೆ ಹೇಳಿರುವ ಎಲ್ಲಾ ಅಂಶಗಳು ಸುಳ್ಳಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಆಸ್ತಿ ನಂ. 1060/ಅ ದಲ್ಲಿ ಯಾವುದೇ ಜಾಗವನ್ನು ಅತೀಕ್ರಮಣ ಮಾಡಿರುವುದಿಲ್ಲ ಹಾಗೂ ತಮ್ಮ ಆಸ್ತಿಯಲ್ಲಿ ಮನೆಯನ್ನು ಕಟ್ಟುತ್ತಿರುವುದರಿಂದ ಈ ದಾವೆಯನ್ನು ದಾಖಲಿಸಲು ಯಾವುದೇ ಸಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಗಳು ರಾಜಕೀಯವಾಗಿ ಬಲಾಢ್ಯರಾಗಿದ್ದು ಗುಂಡಾ

ಪ್ರವೃತಿಯುಳ್ಳವರಾಗಿರುವ ಕಾರಣ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶ ಹೊಂದಿರುತ್ತಾರೆ ಎನ್ನುವ ವಿಷಯವು ಸುಳ್ಳು ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಪಂಚಾಯತಿಯವ ಜೊತೆಗೆ ಮಿಲಾಪೆಯಾಗಿ ತಮಗೆ ಬೇಕಾದಂತೆ ದಸ್ತಾವೇಜಗಳನ್ನು ತಯಾರಿಸಿರುತ್ತಾರೆ ಎಂದು ಸುಳ್ಳಾಗಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯವಕಾಶವನ್ನು ಕೋರಿದ್ದರಿಂದ, ಆಲಿಸಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**